**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**
**ಸಿಸಿ 2748/2021**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ದಿನಾಂಕಃ 14-02-2025** **ಪಿ ಡಬ್ಲ್ಯೂ 1**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಎನ್ ಕೆ ವಕೀಲರಿಂದಃ**

ಆರೋಪಿಗೆ ಮತ್ತೊಮ್ಮೆ ಸಾಲ ನೀಡುವಾಗ ಮೊದಲು ನೀಡಿದ ಸಾಲವನ್ನು ಮರಳಿಸುವಂತೆ ಕೇಳಿದ್ದೀರಾ ಎಂದರೆ ಸಾಕ್ಷಿಯು ಕೇಳಿಲ್ಲ ಎಂದು ನುಡಿಯುತ್ತಾರೆ. ಆರೋಪಿ ಧರ್ಮಸ್ಥಳ ಸಂಘಕ್ಕೆ 3 ಲಕ್ಷ ರೂ ಸಾಲಕ್ಕೆ 9 ಸಾವಿರ ಸಾಲ ಮಾತ್ರ ಕಟ್ಟಿರುತ್ತಾರೆ. ಆರೋಪಿಗೆ ನಾನು ಸಂಘದ ಸಾಲವನ್ನು ಕಟ್ಟುವಂತೆ ಅವರಿಗೆ ಹೇಳಿರಲಿಲ್ಲ. ನಾನು ಯಾವುದೇ ಸಂಘದಿಂದ ಸಾಲ ಪಡೆದಿಲ್ಲ ಹಾಗೂ ಆರೋಪಿಗೆ ಮತ್ತು ಆರೋಪಿ ಅತ್ತೆಗೆ ಯಾವುದೇ ರೀತಿಯ ಸಾಲ ನೀಡಿಲ್ಲ ಎಂದರೆ ಸರಿಯಲ್ಲ.

2021 ರಲ್ಲಿ ನಾನು 70 ಸಾವಿರ ರೂಗಳನ್ನು ನಿಕತ್ ಎಂಬ ನನ್ನ ಸ್ನೇಹಿತೆಯಿಂದ ಸಾಲ ಪಡೆದಿದ್ದೇನೆ. ಸದರಿ ಸಾಲವನ್ನು ಪಡೆದ ದಿನಾಂಕ ನನಗೆ ನಿಖರವಾಗಿ ನೆನಪಿಲ್ಲ. ಆದರೆ 2021 ರಲ್ಲಿ ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ಈ ವಿಚಾರವನ್ನು ನನ್ನ ಪಿರ್ಯಾದಿ ಹಾಗೂ ನೋಟಿಸ್ ಹಾಗೂ ಮುಖ್ಯ ವಿಚಾರಣೆಯಲ್ಲಿ ಹೇಳಿದ್ದೇನೆ . ನಾನು ಈ ರೀತಿ ಹೇಳದಿದ್ದರೂ ಹೇಳಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ಮತ್ತು ಅರೋಪಿ ಗಂಡ 2020 ರಲ್ಲಿ ಹರಿಹರದ ಲದ್ವಾ ಬೀದಿಯಲ್ಲಿ ಮನೆ ಮಾಡಿಕೊಂಡಿದ್ದರು ಎಂದರೆ ಸರಿ. ಮಹಬೂಬ್ ಬಾಷಾ ಎನ್ನುವವರು ಆರೋಪಿಯ ಗಂಡನ ಅಣ್ಣ ಎಂದರೆ ಸರಿ. ಸದರಿಯವರು 2020 ರಿಂದ ಪ್ರಶಾಂತ ನಗರದಲ್ಲಿ ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ಜಾಫರ್ ಸಾದಿಕ್ ಬೆಂಕಿನಗರದಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. 2020 ರಲ್ಲಿ ಅಖಲಿರವರ ಮಕ್ಕಳು ಬೇರೆ ಬೇರೆ ವಾಸವಾಗಿದ್ದರು ಎಂದರೆ ಸಾಕ್ಷಿಯು ಮೊದಲು ಕೂಡಿ ಇದ್ದರು ಈಗ ಬೇರೆ ಬೇರೆ ಆಗಿದ್ದಾರೆ ಎಂದು ನುಡಿಯುತ್ತಾರೆ. ಸದರಿಯವರು ಈಗ 2-3 ವರ್ಷಗಳ ಹಿಂದೆ ಬೇರೆ ಬೇರೆ ಯಾಾಗಿದ್ದಾರೆ ಎಂದು ನುಡಿಯುತ್ತಾರೆ. ಸದರಿಯವರು 2020 ರಿಂದ ಬೇರೆ ಬೇರೆ ವಾಸವಾಗಿದ್ದಾರೆ ಎಂದರೆ ಈಗ ಆಗಿರಬಹುದು ಎಂದು ನುಡಿಯುತ್ತಾರೆ. ಆರೋಪಿತರು ಮೊದಲನೇ ಲಾಕ್ ಡೌನ್ ಸಂದರ್ಭದಲ್ಲಿ ರಾತ್ರೋ ರಾತ್ರಿ ಮನೆ ಬಿಟ್ಟು ಹೋಗಿ ಬೇರೆ ಬೇರೆಯಾಗಿ ವಾಸವಾಗಿದ್ದಾರೆ. ಆರೋಪಿತರನ್ನು ನಾನು ನಮ್ಮ ಮಗ ಹುಡುಡಿದೆವು. ಆರೋಪಿತರು ಪ್ರಶಾಂತ ನಗರದಲ್ಲಿ ಸಿಕ್ಕಿರುತ್ತಾರೆ. ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನ್ನೊಂದಿಗೆ ಯಾವುದೇ ಹಣಕಾಸಿನ ವ್ಯವಹಾರ ಮಾಡಿಲ್ಲ ಹಾಗೂ ಚೆಕ್ ನೀಡಿಲ್ಲ ಎಂದರೆ ಸರಿಯಲ್ಲ. ನನ್ನ ಪಿರ್ಯಾದಿ ಹಾಗೂ ನೋಟಿಸ್ ಹಾಗೂ ಮುಖ್ಯ ವಿಚಾರಣೆಯಲ್ಲಿ ಆರೋಪಿ ಖಾತೆ ನಂಬರ್, ಐ ಎಫ್ ಎಸ್ ಸಿ ನಂಬರ್ನ್ನು ಹೇಳಿ ಬರೆಸಿರುತ್ತೇನೆ. ಸದರಿ ಖಾತೆ ನಂಬರ್, ಐ ಎಫ್ ಎಸ್ ಸಿ ನಂಬರ್ ನನಗೆ ನೆನಪಿಲ್ಲ. ಆರೋಪಿಯ ಚೆಕ್ ನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲಲ.

ನಾಸೀರ್ ಹುಸೇನ್ ರವರ ಪರಿಚಯ ಇಲ್ಲ. ಸದರಿಯವರು ಇಬ್ರಾಹಿಂ ಬೀದಿ ಇಮಾಮ್ ಮೊಹಲ್ಲಾದಲ್ಲಿ ಅವರ ಮನೆ ಇದೆ ಎಂದರೆ ಸರಿ. ಸದರಿ ನಾಸೀರ್ ಹುಸೇನ್ ಬಡ್ಡಿ ವ್ಯವಹಾರ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯ ತಾಯಿ ಜಾಹೀರಾ ಬಾನು ನನಗೆ ಪರಿಚಯವಿಲ್ಲ. ಸದರಿಯವರು ಇಮಾಮ ಮೊಹಲ್ಲಾದಲ್ಲಿ ವಾಸವಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಇಮಾಮ ಮೊಹಲ್ಲಾ ನಮ್ಮ ಮನೆಯಿಂದ ಇಮಾಮ ಮೊಹಲ್ಲಾದ ಇಬ್ರಾಹಿಂ ಬೀದಿಯವರೆಗೆ ಸುಮಾರು 200 ಮೀಟರ್ ಅಂತರ ಇದೆ. ನಾನು ಸಹ ಇಮಾಮ ಮೊಹಲ್ಲಾದಲ್ಲಿ ವಾಸವಾಗಿದ್ದೇನೆ ಎಂದರೆ ಸರಿ. ಆರೋಪಿ ನಾಸೀರ್ ಹುಸೇನ್ ರವರಿಂದ ಆಗಾಗ ಹಣ ಪಡೆಯುವುದು ಮತ್ತು ಕೊಡುವುದು ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿ ತಾಯಿ ನಾಸೀನ್ ಹುಸೇನ್ ರವರಿಂದ 40 ಸಾವಿರ ರೂ ಸಾಲ ಪಡೆದು 2 ಚೆಕ ಗಳನ್ನು ಭದ್ರತೆಗಾಗಿ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಜಾಹೀದಾ ಬಾನು ರವರು ಯಾವುದೇ ಖಾತೆಯನ್ನು ಹೊಂದಿರದ ಕಾರಣ ತಮ್ಮ ಮಗಳಾದ ಕರ್ನಾಟಕ ಬ್ಯಾಂಕ್ ಹರಿಹರ ಶಾಖೆಯ 2 ಚೆಕ್ ನಂ. 865252 ಮತ್ತು 865253 ಗಳನ್ನು ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದರ ಜೊತೆಗೆ 100/ ರೂಗಳ ಒಂದು ಬಾಂಡ್ ಪೇಪರ್ ನ್ನು ಸಹ ಕೊಟ್ಟಿದ್ದರು ಎಂದರೆ ಸರಿಯಲ್ಲ. ಸದರಿ ನಾಸೀರ್ ಹುಸೇನ್ ರವರಿಗೆ ನೀಡಿದ ಚೆಕ್ ಗಳನ್ನು ಮತ್ತು ಬಾಂಡ್ ಪೇಪರ್ ಗಳನ್ನು ಅವರು ನನ್ನ ಮಕ್ಕಳಾದ ಸೈಯದ್ ಹಾಸ್ಮಿ ಮತ್ತು ಸೈಯದ್ ಮಲಿಕ್ ರಿಹಾನ್ ರವರಿಗೆ ನೀಡಿ ಅವರಿಂದ ಸಾಲ ಪಡೆದಿದ್ದರು ಎಂದರೆ ಸರಿಯಲ್ಲ. ಆರೋಪಿ ನಾಸೀರ್ ಹುಸೇನ್ ರವರನ್ನು ಚೆಕ್ ನ್ನು ಮತ್ತು ಬಾಂಡ್ ನ್ನು ಮರಳಿಸುವಂತೆ ಕೇಳಿದಾಗ ಅವರು ಸದರಿ ದಾಖಲೆಗಳು ನನ್ನ ಮಕ್ಕಳ ಬಳಿ ಇವೆ ಎಂದು ಅವರಿಗೆ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಸದರಿ ನಾಸೀರ್ ಹುಸೇನ್ ರವರು ನನ್ನ ಮಕ್ಕಳ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪೊಲೀಸರು ನಮ್ಮನ್ನು ಕರೆಸಿದ್ದು ಅವರಿಗೆ ಬುದ್ದಿವಾದ ಹೇಳಿ ಕಳಿಸಿರುತ್ತಾರೆ ಎಂದು ನುಡಿಯುತ್ತಾರೆ.

ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ಹರಿಹರ